ಗುರುವಾರದ ಉಷ್ಣಾಂಶ 30° ಗರಿಷ್ಠ 19° ಕನಿಷ್ಠ

ಹವಾಮಾನ ಮುನ್ಸೂಚನೆ
ಜಿಲ್ಲೆಯಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಅಲ್ಲಲ್ಲಿ ತುಂತುರು ಮಳೆ ಬೀಳುವ ಸಂಭವ ಇದೆ.

ಹವಾಮಾನ

ಶುಕ್ರವಾರ	ಶನಿವಾರ	ಭಾನುವಾರ
29° 19°	28° 18°	28° 18°

ಸೂರ್ಯೋದಯ: 6:26 ಸೂರ್ಯಾಸ್ತ : 5:54 ಚಂದ್ರೋದಯ: ಬೆ. 7:53 ಚಂದ್ರಾಸ್ತ: ಸಂ. 7:36

ಬುಧವಾರದ ಹವಾಮಾನ : ಗರಿಷ್ಠ 30° ಕನಿಷ್ಠ 20°

ಸಂಕ್ಷಿಪ್ತ ಸುದ್ದಿ

ಗೃಹಿಣಿ ಸಾವು: ಕೊಲೆ ಆರೋಪ

ಪ್ರಜಾವಾಣಿ ವಾರ್ತೆ

ಮದ್ದೂರು: ತಾಲ್ಲೂಕಿನ ಕೆ.ಕೋಡಿಹಳ್ಳಿ ಗ್ರಾಮದ ಪ್ರದೀಪ್ ಅವರ ಪತ್ನಿ ಲಕ್ಷ್ಮಿ (25) ಮಂಗಳವಾರ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

ಲಕ್ಷ್ಮಿ

‘ಮಗಳ ಗಂಡ ಪ್ರದೀಪ್ ಹಾಗೂ ಅತ್ತೆ ಚೆನ್ನಮ್ಮ ವರದಕ್ಷಿಣೆ ಕಿರುಕುಳ ನೀಡಿದ್ದು, ಅವರೇ ಮಗಳಿಗೆ ನೇಣು ಹಾಕಿ ಕೊಲೆ ಮಾಡಿದ್ದಾರೆ’ ಎಂದು ಲಕ್ಷ್ಮಿ ತಾಯಿ ಶಿವಮ್ಮ ಪಟ್ಟಣದ ಠಾಣೆ ಪೊಲೀಸರಿಗೆ ದೂರು ನೀಡಿದ್ದಾರೆ.

ಮಳವಳ್ಳಿ ತಾಲ್ಲೂಕಿನ ಕುರಿದೊಡ್ಡಿ ಗ್ರಾಮದ ಲಕ್ಷ್ಮಿ ಅವರನ್ನು ಪ್ರದೀಪ್ ಅವರಿಗೆ ಕೊಟ್ಟು 4 ವರ್ಷಗಳ ಹಿಂದೆ ಮದುವೆ ಮಾಡಿಕೊಡಲಾಗಿತ್ತು. ದಂಪತಿಗೆ ಒಂದೂವರೆ ವರ್ಷದ ಮಗನಿದ್ದಾನೆ.

ಲಕ್ಷ್ಮಿಯನ್ನು ಕೊಲೆ ಮಾಡಿದ್ದು, ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ನೀಡಬೇಕು ಎಂದು ಕುರಿದೊಡ್ಡಿ ಗ್ರಾ.ಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ ಆಗ್ರಹಿಸಿದ್ದಾರೆ.

ಪ್ರಕರಣ ಸಂಬಂಧ ಪ್ರದೀಪ್ ಅವರನ್ನು ಪಟ್ಟಣದ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಅತ್ತೆ ಚೆನ್ನಮ್ಮ ನಾಪತ್ತೆಯಾಗಿದ್ದಾರೆ.

ವಿದ್ಯುತ್ ಕಂಬ ಮುರಿದು ಸೆಸ್ಕ್ ನೌಕರನಿಗೆ ಗಾಯ

ಮಳವಳ್ಳಿ: ತಾಲ್ಲೂಕಿನ ಹೊಂಬೇಗೌಡನದೊಡ್ಡಿ ಗ್ರಾಮದಲ್ಲಿ ವಿದ್ಯುತ್ ತಂತಿ ದುರಸ್ತಿ ವೇಳೆ ವಿದ್ಯುತ್ ಕಂಬ ಮುರಿದು ಬಿದ್ದಿದ್ದರಿಂದ ಸೆಸ್ಕ್ ನೌಕರ, ಮದ್ದೂರು ತಾಲ್ಲೂಕಿನ ಬೊಪ್ಪಸಮುದ್ರ ಗ್ರಾಮದ ಸುಪ್ರೀತ್ (26) ಅವರ ಕಾಲು ಮುರಿದಿದೆ.

ಮೂರು ವರ್ಷಗಳಿಂದ ಸೆಸ್ಕ್‌ನಲ್ಲಿ ಕೆಲಸ ಮಾಡುತ್ತಿರುವ ಸುಪ್ರೀತ್, ವಿದ್ಯುತ್ ತಂತಿ ದುರಸ್ತಿಗೊಳಿಸುತ್ತಿದ್ದರು. ಈ ವೇಳೆ ವಿದ್ಯುತ್ ಕಂಬ ಮುರಿದುಬಿದ್ದಿದೆ. ಜೊತೆಗಿದ್ದ ಸಿಬ್ಬಂದಿ ಕೂಡಲೇ ಅವರನ್ನು ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇಲುಕೋಟೆಯಲ್ಲಿ ಆಯಿಜನನ್ಯಾಚಾರ್ಯರ 675ನೇ ಜಯಂತ್ಯುತ್ಸವ ನಾಳೆ, ವಿಚಾರಗೋಷ್ಠಿ

ನಂಜೀಯರ್ ಆಯಿ ಸನ್ನಿಧಿಯಲ್ಲಿ ಸಂಭ್ರಮ

ಪ್ರಜಾವಾಣಿ ವಾರ್ತೆ

ಮೇಲುಕೋಟೆ: ಆಯಿಜನನ್ಯಾಚಾರ್ಯರ 675ನೇ ಜಯಂತ್ಯುತ್ಸವ ನ. 29ರಂದು ಮೇಲುಕೋಟೆಯಲ್ಲಿ ನಡೆಯಲಿದ್ದು, ನಂಜೀಯರ್ ಆಯಿ ಸನ್ನಿಧಿಯಲ್ಲಿ ಸಂಭ್ರಮ ಮನೆ ಮಾಡಿದೆ.

ವೈಷ್ಣವ ಪರಂಪರೆಯ ಪ್ರಮುಖ ವೈಷ್ಣವ ಸಂತರಾದ ಸ್ವಾಮಿ ಆಯಿ ಜನನ್ಯಾಚಾರ್ಯರು ಕ್ರಿ.ಶ. 1344ರಲ್ಲಿ ಮೇಲುಕೋಟೆಯಲ್ಲಿ ಜನಿಸಿ, ಚೆಲುವನಾರಾಯಣನ ಕೈಂಕರ್ಯ ನಡೆಸುವ ಜೊತೆಗೆ ಭಾರತಾದ್ಯಂತ ವೈಷ್ಣವ ಭಕ್ತಿ ಸಿದ್ಧಾಂತ ಪಸರಿಸಲು ಶ್ರಮಿಸಿದ್ದಾರೆ.

ರಾಮಾನುಜಾರ ಪರಂಪರೆಯ 74ನೇ ಸಿಂಹಾಸನಾಧಿಪತಿಗಳಲ್ಲಿ ಒಬ್ಬರಾದ ಆಸೂರಿಪೆರುಮಾಳ್, ರಾಮಾನುಜಾ ಚಾರ್ಯರು ಚೆಲುವ ನಾರಾಯಣನ ಕೈಂಕರ್ಯ ಮುಗಿಸಿ ಮೇಲುಕೋಟೆಯಿಂದ ಶ್ರೀರಂಗಕ್ಕೆ ಹಿಂದಿರುಗಿದ ನಂತರವೂ ಇಲ್ಲೇ ನೆಲೆಸಿ ಚೆಲುವನ ಕೈಂಕರ್ಯದಲ್ಲಿ ತೊಡಗಿದ್ದರು. ಇದೇ ವಂಶದಲ್ಲಿ 13ನೇ ಶತಮಾನದಲ್ಲಿ ಆಸೂರಿ ಲಕ್ಷಣಾಚಾರ್ಯರ ಸತ್ಪುತ್ರರಾಗಿ ಆಸೂರಿ ದೇವರಾಜಪೆರುಮಾಳ್ ಅವತರಿಸಿದರು.

ಮೇಲುಕೋಟೆಯಲ್ಲಿ ನಂಜೀಯರ್ ಆಯಿ ಸ್ವಾಮಿಗಳ ದೇಗುಲದಲ್ಲಿ ಜಯಂತ್ಯುತ್ಸವಕ್ಕೆ ಸಿದ್ಧತೆ ನಡೆಯಿತು (ಎಡಚಿತ್ರ). ಆಯಿಜನನ್ಯಾಚಾರ್ಯ ಸ್ವಾಮಿ

ಶ್ರೀಭಾಷ್ಯದ ವಿಚಾರಗೋಷ್ಠಿ

ಆಚಾರ್ಯರ ಗ್ರಂಥಗಳ ವ್ಯಾಖ್ಯಾನಗಳ ಕುರಿತಂತೆ ನ.28 ಮತ್ತು 29ರಂದು ರಾಷ್ಟ್ರಮಟ್ಟದ ವಿಚಾರಗೋಷ್ಠಿ ನಡೆಯಲಿದೆ. ತಿರುಪತಿ, ಶ್ರೀರಂಗಂ, ತಿರುವಲ್ಲಿಕೇಣಿ, ಆಂಧ್ರದ ವಿದ್ವಾಂಸರು ಆಯಿಸ್ವಾಮಿಗಳು ರಚಿಸಿದ ಆಚಾರ್ಯಹೃದಯ, ಶ್ರೀವಚನಭೂಷಣ ವ್ಯಾಖ್ಯಾನ ಗ್ರಂಥಗಳ ಉಪನ್ಯಾಸ ಮತ್ತು ಶ್ರೀಭಾಷ್ಯಮತಿಮನ್ಮಥ ಮಂಥನ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಜಯಂತಿಯಂದು ಸಂಜೆ ಚೆಲುವನಾರಾಯಣಸ್ವಾಮಿ ಉತ್ಸವವಿದೆ.

ಶಾಸ್ತ್ರಪಾರಂಗತರಾದ ದೇವರಾಜ ಪೆರುಮಾಳ್ ಚೆಲುವನಾರಾಯಣ ಸ್ವಾಮಿಗೆ ಪ್ರತಿನಿತ್ಯ ಹೂವಿನ ಮಾಲೆಗಳನ್ನು, ರಾತ್ರಿ ವೇಳೆ ಪಚ್ಚಕರ್ಪೂರ ಕೇಸರಿ ಮಿಶ್ರಿತ ಹಸುವಿನ ಹಾಲನ್ನು ಅರ್ಪಿಸುತ್ತಿದ್ದರು. ಒಂದು ದಿನ ದೇಹಾಲಸ್ಯದಿಂದ ಹಾಲು ಕೊಂಡೊಯ್ಯುವುದು ವಿಳಂಬವಾದಾಗ ಸಾಕ್ಷಾತ್ ತಿರುನಾರಾಯಣನೇ ಇಂದೇಕೆ ಆಯಿ (ತಾಯಿ) ಹಾಲಿಲ್ಲ ಎಂದು ಕೇಳಿದನಂತೆ.

ಅಂದಿನಿಂದ ದೇವರಾಜರಿಗೆ ಆಯಿ ಜನನ್ಯಾಚಾರ್ಯ ಎಂದೇ ಹೆಸರಾಯಿತು.

ರಾಮಾನುಜಾಚಾರ್ಯರ ಕಾಲದ ನಂತರ ಜೀರ್ಣಾವಸ್ಥೆ ತಲುಪಿದ್ದ ನೂರಾರು ವೈಷ್ಣವ ದೇಗುಲ ಗಳನ್ನು ಜೀರ್ಣೋದ್ಧಾರ ಮಾಡಿದ ಸಂತ ಮಣವಾಳ ಮಾಮುನಿಗೆ ಆಯಿ ಜನನ್ಯಾಚಾರ್ಯರು ಗುರುವಾಗಿ, ವೈಷ್ಣವ ಸಂಪ್ರದಾಯದ ವಿಚಾರಧಾರೆಗಳನ್ನು ಬೋಧಿಸಿದರು. ತಮಿಳುನಾಡಿನ ಅಳ್ವಾರ್ತಿರುನಗರಿಯಲ್ಲಿ ದಿವ್ಯಪ್ರಬಂಧದ ಸಾರತಿಳಿಸುವ ಗ್ರಂಥವಾದ ಆಚಾರ್ಯ ಹೃದಯವೆಂಬ ಸಕಲಾರ್ಥಗಳನ್ನೂ ವಿವರಿಸಿ ಕಾಲಕ್ಷೇಪ ನೀಡುತ್ತಿದ್ದರು.



> **ವೈಷ್ಣವ ದೇಗುಲಗಳ ಜೀರ್ಣೋದ್ಧಾರಕ ಮಣವಾಳಮಾಮುನಿಗಳಿಗೇ ಗುರುಗಳಾಗಿದ್ದ ಆಯಿಜನನ್ಯಾಚಾರ್ಯರು ಸ್ಮರಣೀಯರು. ಅವರ ಜಯಂತಿಯನ್ನು ವೈಭವಯುತವಾಗಿ ನಡೆಸುತ್ತಿದ್ದೇವೆ.**
> **ಆಯಿ ನರಸಿಂಹನ್**

ಪರಮ ಕಾರುಣಿಕರಾದ ಆಯಿಸ್ವಾಮಿಗಳು ಆಚಾರ್ಯಹೃದಯ, ತಿರುಪ್ಪಾವೈ, ಶ್ರೀವಚನಭೂಷಣ, ತಿರುಮಾಲೈ, ಪೆರಿಯತಿರುಮೊಳಿ ವಾಖ್ಯಾನಗಳು ಮತ್ತು ಉಪನಿಷದ್ ಸಾರವಾದ ಕುರಂಗಿ ಪಂಚಕವೆಂಬ ಅದ್ಭುತವಾದ ಸ್ತೋತ್ರ ಮತ್ತು ಮುಕ್ತಶ್ಲೋಕಗಳಲ್ಲದೆ, ಪದ್ಯಗಳನ್ನೂ ರಚಿಸಿದ್ದಾರೆ. ಮಣವಾಳ ಮಾಮುನಿ ರಚಿಸಿದ ಶ್ರೀಶಾನುದಾಸ ಗುರುಪ್ರಪತ್ತಿ ಮತ್ತು ಶ್ರೀಶಾನುದಾಸ ಮುನಿಮಂಗಳಮ್ ಆಯಿಯವರ ಹಿರಿಮೆಯನ್ನು ಸಾರುತ್ತದೆ.

ಕೈದಿಗಳು ಬದುಕು ಉತ್ತಮ ಪಡಿಸಿಕೊಳ್ಳಲಿ

ಹಿರಿಯ ಸಿವಿಲ್ ನ್ಯಾಯಾಧೀಶ ಎಚ್‌.ಎಸ್‌.ಮಂಜುನಾಥ್ ಸಲಹೆ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಎಲ್ಲರನ್ನೂ ಪ್ರೀತಿಯಿಂದ ಕಾಣುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಸಾಧ್ಯ. ಕೈದಿಗಳು ತಮ್ಮ ತಪ್ಪನ್ನು ತಿದ್ದುಕೊಂಡು ಮುಂದಿನ ಬದುಕನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳಬೇಕು’ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಎಚ್‌.ಎಸ್‌.ಮಂಜುನಾಥ್ ಸಲಹೆ ನೀಡಿದರು.

ಮಮತೆಯ ಮಡಿಲು ಗೆಳೆಯರ ಬಳಗದ ವತಿಯಿಂದ ಇತ್ತೀಚೆಗೆ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ನಗರದ ಜಿಲ್ಲಾ ಕಾರಾಗೃಹದಲ್ಲಿ ನಡೆದ ‘ನಮ್ಮ ನಾಡು ನಮ್ಮ ಹಾಡು ಕಾರ್ಯಕ್ರಮ’ದಲ್ಲಿ ಮಾತನಾಡಿದರು.

‘ಯಾವುದೋ ಕೆಟ್ಟ ಸಮಯ ನಿಮ್ಮನ್ನು ಅಪರಾಧಿಗಳನ್ನಾಗಿ ಮಾಡುತ್ತದೆ. ಬದುಕನ್ನು ಬದಲಿಸಿಕೊಳ್ಳಲು ವಿಪುಲ ಅವಕಾಶಗಳಿವೆ. ನೀವು ಬದಲಾದರೆ ನಿಮ್ಮ ಕುಟುಂಬಕ್ಕೆ ಒಳ್ಳೆಯದಾಗುತ್ತದೆ’ ಎಂದು ಹೇಳಿದರು.

ಮಮತೆಯ ಮಡಿಲು ಗೆಳೆಯರ ಬಳಗದ ವತಿಯಿಂದ ಜಿಲ್ಲಾ ಕಾರಾಗೃಹದಲ್ಲಿ ನಡೆದ ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಉದ್ಘಾಟಿಸಿದರು

ಕಾರ್ಯಕ್ರಮ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಕೆ.ಟಿ. ಶ್ರೀಕಂಠೇಗೌಡ ಮಾತನಾಡಿ, ‘ಕಾರಾಗೃಹದಲ್ಲಿ ಅಂಧರ ಗೆಳೆಯರ ಬಳಗ ನಡೆಸುತ್ತಿರುವ ಕಾರ್ಯಕ್ರಮ ಅರ್ಥಪೂರ್ಣ ಮತ್ತು ಮಹತ್ವದಿಂದ ಕೂಡಿದೆ. ಸ್ವಾತಂತ್ರ್ಯ ನಂತರದ ಭಾರತದಲ್ಲಿ ಕಾಣಿಸಿಕೊಂಡ ದೊಡ್ಡ ಸಮಸ್ಯೆ ರಾಜ್ಯಗಳ ವಿಂಗಡಣೆಯಾಗಿತ್ತು. ಸರ್ದಾರ್ ವಲ್ಲಭಭಾಯ್ ಪಟೇಲ್ ಅವರಿಗೆ ಹೊಣೆಗಾರಿಕೆ ನೀಡಿದ ಬಳಿಕ ಅವರು ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ಮರುವಿಂಗಡಣೆ ಮಾಡಿದರೆ ಮಾತ್ರ ಈ ಸಮಸ್ಯೆ ಬಗೆಹರಿಸಲು ಸಾಧ್ಯ ಎಂದಿದ್ದರು. ಬಳಿಕ ರೂಪುಗೊಂಡಿದ್ದೇ ಭಾಷಾವಾರು ರಾಜ್ಯಗಳು. 1973ರ ನ.1ರಂದು ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ನಾಮಕರಣ ಮಾಡಲಾಯಿತು’ ಎಂದರು.

ಬಳಿಕ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಜಿ.ಎಸ್.ಶಿವರುದ್ರಪ್ಪ ರಚನೆಯ ಗೀತೆಗಳು ನೆರೆದಿದ್ದವರನ್ನು ರಂಜಿಸಿತು. ದೃಷ್ಟಿ ವಿಶೇಷ ಚೇತನ ಬಳಗದ ಸಂಸ್ಥಾಪಕ ಕೆ.ಪ್ರಸಾದ್, ಮೋಹನ್‌ಕುಮಾರ್, ಜಯಣ್ಣ, ಕಾಜಿಯಾ ಅಜುಂ, ಮಂಜುನಾಥ್, ಉಪನ್ಯಾಸಕರಾದ ನಂದಿನಿ, ಜಿಲ್ಲಾ ಕಾರಾಗೃಹ ಅಧೀಕ್ಷಕ ಪಿ.ಎಸ್. ಅಂಬೇಕರ್, ಜೈಲರ್‌ಗಳಾದ ಮಹೇಶ್ ಸಿ.ಶಾನಭಾಗ, ರವಿಕುಮಾರ್ ಭಜಂತ್ರಿ, ಪತ್ರಕರ್ತರಾದ ಕೆ.ಸಿ.ಮಂಜುನಾಥ್, ಕೆ.ಎನ್.ರವಿ ಇದ್ದರು.

ಇಂದು ಆರೋಗ್ಯ ತಪಾಸಣಾ ಶಿಬಿರ

ಮಂಡ್ಯ: ಸಮೃದ್ಧಿ ಲಯನ್ಸ್, ಕೃಷಿಕ, ಸಹಕಾರ ಲಯನ್ಸ್, ಮಿಮ್ಸ್, ವರ್ಧಮಾನ್ ಜೈನ್ ನೇತ್ರಾಲಯ, ಭಾರತೀಯ ದಂತ ವೈದ್ಯಕೀಯ ಸಂಘ, ನ್ಯಾಷನಲ್ ಹೆಲ್ತ್ ಒರಲ್ ಪಾಲಿಸಿ, ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ನ. 28ರಂದು ತಾಲ್ಲೂಕಿನ ಕೊತ್ತತ್ತಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಇಸಿಜಿ, ಮಧುಮೇಹ, ದಂತ, ಸ್ತ್ರೀರೋಗ, ಚರ್ಮರೋಗ, ಕೀಲು ಮತ್ತು ಮೂಳೆ ತಪಾಸಣೆ, ಕಣ್ಣಿನ ಪೊರೆ ತಪಾಸಣೆ, ಶಸ್ತ್ರ ಚಿಕಿತ್ಸೆ ಮೂಲಕ ಐಓಎಲ್ ಲೆನ್ಸ್ ಅಳವಡಿಕೆ ಮಾಡಲಾಗುವುದು. ಕಣ್ಣಿನ ಶಸ್ತ್ರಚಿಕಿತ್ಸೆಗೆ ಆಧಾರ್ ಕಾರ್ಡ್ ತರಬೇಕು. ಬೆಳಿಗ್ಗೆ 9.30ರಿಂದ ಮಧ್ಯಾಹ್ನ 1.30ರವರೆಗೆ ಶಿಬಿರ ನಡೆಯಲಿದೆ. ಮೊ. 9380759918, 9448101081 ಸಂಪರ್ಕಿಸಬಹುದು.

ಸುದ್ದಿ 2 ನಿಮಿಷ

30ರಿಂದ ಎನ್‌ಎಸ್‌ಎಸ್ ಶಿಬಿರ

ಮಳವಳ್ಳಿ: ಪಟ್ಟಣದ ಶಾಂತಿ ಪದವಿಪೂರ್ವ ಕಾಲೇಜಿನ 2019–20ನೇ ಸಾಲಿನ ಎನ್.ಎಸ್.ಎಸ್ 16ನೇ ವರ್ಷದ ವಾರ್ಷಿಕ ವಿಶೇಷ ಶಿಬಿರ ತಾಲ್ಲೂಕಿನ ಕ್ಯಾತನಹಳ್ಳಿ ಗ್ರಾಮದಲ್ಲಿ ನ.30ರಿಂದ ಡಿ.6ರವರೆಗೆ ಹಮ್ಮಿಕೊಳ್ಳಲಾಗಿದೆ.

ನ.30ರಂದು ಮಧ್ಯಾಹ್ನ 3 ಗಂಟೆಗೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶಾಸಕ ಡಾ.ಕೆ. ಅನ್ನದಾನಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಂತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಕೆ.ನಾಗಮಣಿ ನಾಗೇಗೌಡ ಅಧ್ಯಕ್ಷತೆ ವಹಿಸಲಿದ್ದು, ಧ್ವಜಾರೋಹಣವನ್ನು ಜಿಲ್ಲಾ ಪಂಚಾಯಿತಿ ಸದಸ್ಯೆ ಸುಜಾತಾ ಸುಂದ್ರಪ್ಪ ನೆರವೇರಿಸುವರು. ರಾಷ್ಟ್ರೀಯ ಸೇವಾ ಯೋಜನೆಯ ವಿಭಾಗೀಯ ಅಧಿಕಾರಿ ಡಾ.ಟಿ. ಕೆ.ರವಿ, ಜಿಲ್ಲಾ ಪಂಚಾಯಿತಿ ಸದಸ್ಯ ರವಿ, ತಾಲ್ಲೂಕು ಪಂಚಾಯಿತಿ ಸದಸ್ಯೆ ಚಿಕ್ಕತಾಯಮ್ಮ, ಮನ್‌ಮುಲ್ ನಿರ್ದೇಶಕ ವಿಶ್ವನಾಥ್, ಪುರಸಭೆ ಸದಸ್ಯ ಸಿದ್ದರಾಜು, ಶಾಂತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ.ಎಚ್.ಕೆಂಪಯ್ಯ, ತಿಮ್ಮೇಗೌಡ, ಪುಟ್ಟೇರೇಗೌಡ, ಪುಟ್ಟರಾಜು, ಪ್ರಾಂಶುಪಾಲ ಎಂ.ಸಿ. ಶಿವಪ್ಪ ಭಾಗವಹಿಸಲಿದ್ದಾರೆ.

ಮೇಲುಕೋಟೆಗೆ ಶಿವರಾಜ್ ಚೌಹಾಣ್ ಕುಟುಂಬ ಭೇಟಿ

ಮೇಲುಕೋಟೆ: ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹಾಗೂ ಅವರ ಪತ್ನಿ ಸಾಧ್ನಾ ಮೇಲುಕೋಟೆಗೆ ಬುಧವಾರ ಭೇಟಿ ನೀಡಿ ಬೆಟ್ಟದೊಡೆಯ ಯೋಗಾನರಸಿಂಹಸ್ವಾಮಿಗೆ ಅಭಿಷೇಕ ಮಾಡಿಸಿದರು.

ಬೆಳಿಗ್ಗೆ 11 ಗಂಟೆ ಸುಮಾರಿಗೆ ಕುಟುಂಬ ಸಮೇತರಾಗಿ ಬಂದ ಚೌಹಾಣ್, ಚೆಲುವನಾರಾಯಣ ಸ್ವಾಮಿಯ ದರ್ಶನ ಪಡೆದರು. ತಿರುನಾರಾಯಣಸ್ವಾಮಿ ಮತ್ತು ಯದುಗಿರಿ ನಾಯಕಿ ಅಮ್ಮನವರು, ರಾಮಾನುಜರ ದರ್ಶನ ಪಡೆದರು.

‘ಇಲ್ಲಿ ನಡೆಯುವ ಪ್ರಮುಖ ಉತ್ಸವ ಅಥವಾ ಮಹೋತ್ಸವಗಳಲ್ಲಿ ಸೇವೆ ಮಾಡುವ ಮೂಲಕ ಚೆಲುವನಾರಾಯಣನ ಕೈಂಕರ್ಯದಲ್ಲಿ ಭಾಗಿಯಾಗುವ ಬಯಕೆ ಇದೆ. ರಾಮಾನುಜರ ದಿವ್ಯಕ್ಷೇತ್ರದ ದರ್ಶನದಿಂದ ಪುನೀತ ಭಾವ ಉಂಟಾಗಿದೆ’ ಎಂದು ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದರು

ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ನಂಜೇಗೌಡ, ಅರ್ಚಕರಾದ ವಿದ್ವಾನ್ ಆನಂದಾಳ್ವಾರ್, ಸ್ವಾಮಿ ಸನ್ನಿಧಿಯ ಪರಿಚಾರಕ ಪಾರ್ಥಸಾರಥಿ, ಅರ್ಚಕ ನಾರಾಯಣಭಟ್ಟರ್, ಚಿನ್ನಜೀಯರ್ ಮಠದ ಹರಿಕೃಷ್ಣ ಇದ್ದರು.

ಕ್ಷಯರೋಗದಿಂದ ನಿಮಿಷಕ್ಕೆ ನಾಲ್ವರ ಸಾವು: ಮಹೇಶ್

ಪ್ರಜಾವಾಣಿ ವಾರ್ತೆ

ನಾಗಮಂಗಲ: ದೇಶದಲ್ಲಿ ಕ್ಷಯರೋಗಕ್ಕೆ ತುತ್ತಾಗಿ ಸರಿಯಾಗಿ ಚಿಕಿತ್ಸೆ ಪಡೆಯದೇ ಪ್ರತಿ ನಿಮಿಷಕ್ಕೆ 3ರಿಂದ 4 ಜನರು ಮೃತಪಡುತ್ತಿದ್ದಾರೆ ಎಂದು ಬಿಂಡಿಗನವಿಲೆ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ಸಹಾಯಕ ಮಹೇಶ್ ಹೇಳಿದರು.

ತಾಲ್ಲೂಕಿನ ಪಿ.ನೇರಲಕೆರೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಆಯೋಜಿಸಿದ್ದ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನದಲ್ಲಿ ಮಾತನಾಡಿದರು.

ಕ್ಷಯರೋಗ ಬ್ಯಾಕ್ಟೀರಿಯಾಗಳಿಂದ ಬರುವ ಕಾಯಿಲೆಯಾಗಿದ್ದು, ಚಿಕಿತ್ಸೆ ಮೂಲಕ ಸಂಪೂರ್ಣವಾಗಿ ಗುಣಪಡಿಸಬಹುದು. ವಿದ್ಯಾರ್ಥಿಗಳು ತಮ್ಮ ಗ್ರಾಮಗಳಲ್ಲಿ ಯಾರಿಗಾದರೂ ದೀರ್ಘಾವಧಿಯ ಕೆಮ್ಮು, ಕಫಾದಲ್ಲಿ ರಕ್ತ ಬರುವುದು, ದೇಹದ ತೂಕ ಕಡಿಮೆಯಾಗುತ್ತಿರುವ ಲಕ್ಷಣಗಳು ಕಂಡು ಬಂದರೆ ಅವರಿಗೆ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳುವಂತೆ ತಿಳಿವಳಿಕೆ ನೀಡಬೇಕು ಎಂದು ಸಲಹೆ ನೀಡಿದರು.

ಶಾಲೆಯಲ್ಲಿ ಹಿರಿಯ ಆರೋಗ್ಯ ಸಹಾಯಕ ಮಹೇಶ್ ಕ್ಷಯರೋಗದ ಬಗ್ಗೆ ಮಾತನಾಡಿದರು

ಶಾಲೆ ಶಿಕ್ಷಕ ರಮೇಶ್ ಮಾತನಾಡಿ, ‘ರೋಗಿ ಕೆಮ್ಮುವಾಗ ಕರವಸ್ತ್ರದಿಂದ ಬಾಯಿ ಮುಚ್ಚಿಕೊಳ್ಳಬೇಕು. ಕಂಡಕಂಡಲ್ಲಿ ಉಗುಳುವುದನ್ನು ನಿಯಂತ್ರಿಸುವ ಮೂಲಕ ರೋಗ ಇತರರಿಗೆ ಹರಡದಂತೆ ತಡೆಯಬಹುದು’ ಎಂದರು.

ಮುಖ್ಯ ಶಿಕ್ಷಕ ಶಹಾಬುದ್ದೀನ್ ಡಿ.ಬಣಕಾರ್, ಶಿಕ್ಷಕಿ ಉಮಾದೇವಿ, ಶಿಕ್ಷಕ ನಟರಾಜ್ ಇದ್ದರು.

ಮಂಡ್ಯ: ಕರ್ನಾಟಕ ರಾಜ್ಯೋತ್ಸವ ಆಚರಣೆ

ಮಂಡ್ಯ: ಅಖಂಡ ಕರ್ನಾಟಕ ರಕ್ಷಣಾ ಸೇವಾ ದಳ ವತಿಯಿಂದ ನಗರದ ಗಾಂಧಿ ಭವನದಲ್ಲಿ ಬುಧವಾರ 64ನೇ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು.

ಸೇವಾ ದಳ ಸಂಸ್ಥಾಪಕ, ರಾಜ್ಯ ಘಟಕದ ಅಧ್ಯಕ್ಷ ಸಿಂಹ ಶಿವಗೌಡ ಮಾತನಾಡಿ, ‘ಸೇನೆಯಿಂದ ನಿವೃತ್ತಿಯಾದ ನಂತರ ನಾಡು, ನುಡಿ, ಜಲ ರಕ್ಷಣೆಗಾಗಿ ಏನಾದರೂ ಸೇವೆ ಮಾಡಬೇಕು ಎಂಬ ಉದ್ದೇಶದಿಂದ ಸೇವಾದಳ ಸ್ಥಾಪಿಸಲಾಗಿದ್ದು, ಕರ್ನಾಟಕದಾದ್ಯಂತ ಹೋರಾಟಗಳಲ್ಲಿ ತೊಡಗಿಸಿಕೊಳ್ಳಲಾಗಿದೆ. ನಾಡಿನ ಸಮಸ್ಯೆ ಬಗೆಹರಿಸಲು ಸದಾ ಕಟಿಬದ್ಧರಾಗಿರುತ್ತೇವೆ’ ಎಂದು ತಿಳಿಸಿದರು.

ಬದುಕು ಬೆಳಕು ಸೇವಾ ಸಮಿತಿ ಅಧ್ಯಕ್ಷ ಎಚ್.ಆರ್.ಅರವಿಂದ್, ಸೇವಾ ದಳದ ರಾಜ್ಯ ಆಯ್ಕೆ ಸಮಿತಿಯ ಎಂ.ಲೋಕೇಶ್, ವಕೀಲ ಎಂ.ಗುರುಪ್ರಸಾದ್, ಕಾನೂನು ಸಲಹೆಗಾರರಾದ ಪದ್ಮಾ, ದೇವರಾಜ, ರತ್ನಮ್ಮ, ಜೆಡಿಎಸ್ ನಾಯಕಿ ನೀನಾ ಪಟೇಲ್, ಬೆಟ್ಟಸ್ವಾಮಿ, ಪ್ರವೀಣ್ ಇದ್ದರು.

ನಾಗಮಂಗಲ ತಾಲ್ಲೂಕಿನಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟ ವ್ಯಕ್ತಿಯೊಬ್ಬರ ಮನೆಗೆ ಡಾ.ಎಂ.ವಿ.ವೆಂಕಟೇಶ್ ಭೇಟಿ ನೀಡಿ ಸಾಂತ್ವನ ಹೇಳಿದರು

ಮೃತರ ಮನೆಗಳಿಗೆ ಜಿಲ್ಲಾಧಿಕಾರಿ ಭೇಟಿ

ನಾಗಮಂಗಲ: ತಾಲ್ಲೂಕಿನ ರಾಮದೇವನಹಳ್ಳಿ ಗೇಟ್ ಬಳಿ ಭೀಕರ ರಸ್ತೆ ಅಪಘಾತದಲ್ಲಿ ಮೃತಪಟ್ಟ, ಪಟ್ಟಣದ ಅಲ್‌- ಫಲ್ಲಾ ಸಹಕಾರ ಬ್ಯಾಂಕ್‌ನ 8 ನಿರ್ದೇಶಕರ ಮನೆಗಳಿಗೆ ಜಿಲ್ಲಾಧಿಕಾರಿ ಡಾ.ಎಂ.ವಿ.ವೆಂಕಟೇಶ್ ಭೇಟಿ ನೀಡಿ ಸಂಬಂಧಿಕರಿಗೆ ಸಾಂತ್ವನ ಹೇಳಿದರು.

‘ಮೃತರ ಕುಟುಂಬದವರು ಜೀವನದ ಬಗ್ಗೆ ಯಾವುದೇ ರೀತಿಯಲ್ಲಿ ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ಧೈರ್ಯದಿಂದ ಇರಬೇಕು. ಸರ್ಕಾರದಿಂದ ಸಿಗುವ ಎಲ್ಲಾ ರೀತಿಯ ಸವಲತ್ತುಗಳನ್ನು ಕಲ್ಪಿಸಿಕೊಡಲು ಅಗತ್ಯ ಕ್ರಮ ತೆಗೆದುಕೊಳ್ಳುತ್ತೇನೆ’ ಎಂದು ಜಿಲ್ಲಾಧಿಕಾರಿ ಭರವಸೆ ನೀಡಿದರು.

ಕೇಂದ್ರಕ್ಕೆ ತಕ್ಕ ಪಾಠ: ವೆಂಕಟೇಶ್

ಮೈಸೂರು: ‘ಮಹಾರಾಷ್ಟ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲಿಕ್ಕಾಗಿ ಸಂವಿಧಾನವನ್ನೇ ಬುಡಮೇಲು ಮಾಡಲು ಮುಂದಾಗಿದ್ದ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ತಕ್ಕಪಾಠ ಕಲಿಸಿದೆ’ ಎಂದು ಕಾಂಗ್ರೆಸ್ ಮುಖಂಡ ಎಚ್.ಎ.ವೆಂಕಟೇಶ್ ತಿಳಿಸಿದ್ದಾರೆ.

‘ಇದು ಎಲ್ಲಾ ಪಕ್ಷಗಳಿಗೂ ಮಾರ್ಗದರ್ಶಿ ಆಗಬೇಕು’ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಆದಿಚುಂಚನಗಿರಿ: ವೈಭವದ ಲಕ್ಷ ದೀಪೋತ್ಸವ

ಪ್ರಜಾವಾಣಿ ವಾರ್ತೆ

ನಾಗಮಂಗಲ: ಕಾರ್ತೀಕ ಮಾಸದ ಪ್ರಯುಕ್ತ ಆದಿಚುಂಚನಗಿರಿಯಲ್ಲಿ ಆಯೋಜಿಸಿದ್ದ ಲಕ್ಷ ದೀಪೋತ್ಸವ ವೈಭವದಿಂದ ನಡೆಯಿತು.

ಅಮಾವಾಸ್ಯೆ ಅಂಗವಾಗಿ ಬೆಳಿಗ್ಗೆಯಿಂದಲೇ ಕ್ಷೇತ್ರದ ಕಾಲ ಭೈರವೇಶ್ವರ ಮತ್ತು ಗಂಗಾಧರೇಶ್ವರ ಮೂರ್ತಿಗಳು ಸೇರಿದಂತೆ ಎಲ್ಲಾ ದೇವಾಲಯಗಳ ಮೂರ್ತಿಗಳಿಗೆ ಪೀಠಾಧ್ಯಕ್ಷ ನಿರ್ಮಲಾನಂದ ನಾಥ ಸ್ವಾಮೀಜಿ ಅವರ ನೇತೃತ್ವದಲ್ಲಿ ಪಂಚಾಮೃತಾಭಿಷೇಕ ಸೇರಿದಂತೆ ವಿವಿಧ ಪೂಜಾ ಕಾರ್ಯಗಳು ಜರುಗಿದವು.

ನಾಗಲಿಂಗೇಶ್ವರ ಸ್ವಾಮಿ ಸನ್ನಿಧಿಯಲ್ಲಿ ಹೋಮ ಹವನ ಸೇರಿದಂತೆ ಬಾಲಗಂಗಾಧರನಾಥ ಸ್ವಾಮೀಜಿ ಅವರ ಗದ್ದುಗೆ ಪೂಜೆ ಕಾರ್ಯಕ್ರಮಗಳು ನೆರವೇರಿದವು.

ಸಂಜೆ 6 ಗಂಟೆಗೆ ಗೋಧೂಳಿ ಲಗ್ನದಲ್ಲಿ ಕಾಲಭೈರವೇಶ್ವರ ಸ್ವಾಮಿ ದೇವಾಲಯದಲ್ಲಿ ಸಿದ್ಧ ಮಾಡಿದ್ದ ಮುಖ್ಯ ಜ್ಯೋತಿಯನ್ನು ಚುಂಚಶ್ರೀಗಳು ಬೆಳಗುವ ಮೂಲಕ ಲಕ್ಷ ದೀಪೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಲ್ಯಾಣಿಯಲ್ಲಿ ಗಂಗಾ ಪೂಜೆ ನಡೆದ ನಂತರ ಭಕ್ತರು ಸಹ ದೀಪಗಳನ್ನು ಬೆಳಗುವ ಮೂಲಕ ಲಕ್ಷ ದೀಪೋತ್ಸವಕ್ಕೆ ಸಾಕ್ಷಿಯಾದರು.

ಆದಿಚುಂಚನಗಿರಿಯಲ್ಲಿ ನಡೆದ ಲಕ್ಷ ದೀಪೋತ್ಸವ ಕಾರ್ಯಕ್ರಮಕ್ಕೆ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು

ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಭಕ್ತರು ಲಕ್ಷ ದೀಪೋತ್ಸವದಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದರು. ಎಲ್ಲ ಭಕ್ತರಿಗೆ ಅನ್ನಪೂರ್ಣೇಶ್ವರಿ ಭವನದಲ್ಲಿ ಅನ್ನ ಸಂತರ್ಪಣೆ ಮಾಡಲಾಯಿತು.

ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ಇದ್ದರು.

ಸುಧಾ, ಮಯೂರ ಓದಿರಿ

ದೆಹಲಿಯಲ್ಲಿ ಡಿ.12ಕ್ಕೆ ಪಡಿತರ ವಿತರಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಪಡಿತರ ವಿತರಣೆ ಸಮಸ್ಯೆ ಸಂಬಂಧಿಸಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಡಿ.12ರಂದು ದೆಹಲಿಯ ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ’ ಎಂದು ಕರ್ನಾಟಕ ರಾಜ್ಯ ಸರ್ಕಾರಿ ಪಡಿತರ ವಿತರಕರ ಸಂಘದ ರಾಜ್ಯ ಘಟಕದ ಅಧ್ಯಕ್ಷ, ರಾಷ್ಟ್ರೀಯ ಕಾರ್ಯಾಧ್ಯಕ್ಷ ಟಿ.ಕೃಷ್ಣಪ್ಪ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ‘ಕೇಂದ್ರ ಸರ್ಕಾರ ವಿರುದ್ಧ ಪ್ರತಿಭಟನೆ ನಡೆಸಲಾಗುತ್ತಿದ್ದು, ರಾಜ್ಯದ ಎಲ್ಲಾ ಪಡಿತರ ವಿತರಕರು, ವಿಎಸ್‌ಎಸ್‌ಎನ್ ಕಾರ್ಯದರ್ಶಿಗಳ ಭಾಗವಹಿಸಲಿದ್ದಾರೆ. ಪ್ರತಿ ಕ್ವಿಂಟಲ್‌ಗೆ ₹250 ಕಮಿಷನ್ ನೀಡಬೇಕು, ಅಕ್ಕಿಯೊಂದಿಗೆ ಸಕ್ಕರೆ, ಅಡುಗೆ ಎಣ್ಣೆ, ಉಪ್ಪು ಸೇರಿದಂತೆ ಇತರೆ ಸಾಮಗ್ರಿ ನೀಡಬೇಕು, ಛತ್ತೀಸ್‌ಗಡ ಹಾಗೂ ಪುದುಚೇರಿಯಲ್ಲಿ ಕಾರ್ಡ್‌ದಾರರಿಗೆ ನೇರ ಹಣ ಸಂದಾಯ ಮಾಡುತ್ತಿರುವುದನ್ನು ಇತರೆಡೆಯೂ ವಿಸ್ತರಿಸಲು ಕೇಂದ್ರ ಸರ್ಕಾರ ಕೂಡಲೇ ನಿಲ್ಲಿಸಬೇಕು’ ಎಂದು ಆಗ್ರಹಿಸಲಾಗುವುದು.

‘ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಎರಡು ಕೆ.ಜಿ. ಅಕ್ಕಿ ಕಡಿತಗೊಳಿಸಿ 1 ಕೆ.ಜಿ. ಬೇಳೆ ಕೊಡಲು ತೀರ್ಮಾನಿಸಲಾಗುತ್ತಿದ್ದು, ಬಡಜನರ ಹಕ್ಕು ಕಸಿಯಲಾಗುತ್ತಿದೆ. ಕೇಂದ್ರ ಸರ್ಕಾರ ನೀಡುವ ಪಡಿತರವನ್ನು ಕಡಿತಗೊಳಿಸದೆ ಅಷ್ಟೇ ಪ್ರಮಾಣದಲ್ಲಿ ನೀಡಬೇಕು. ಇಲ್ಲದಿದ್ದಲ್ಲಿ ರಾಜ್ಯದಲ್ಲಿಯೂ ಮುಂದಿನ ದಿನಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು

‘ದೆಹಲಿಯಲ್ಲಿ ಡಿ.2ರಿಂದ 13ರವರೆಗೆ ದಿನಕ್ಕೆ ಮೂರು ಅಥವಾ ನಾಲ್ಕು ರಾಜ್ಯಗಳು ಸೇರಿ ನಿರಂತರವಾಗಿ ಪ್ರತಿಭಟನೆ ನಡೆಸಲಾಗುವುದು. ಡಿ. 12ರಂದು ಕೇರಳ, ಮಹಾರಾಷ್ಟ್ರ, ತೆಲಂಗಾಣ, ಕರ್ನಾಟಕ ರಾಜ್ಯದ ವಿತರಕರು ಪ್ರತಿಭಟನೆ ನಡೆಸಲಿದ್ದಾರೆ. ಜಿಲ್ಲೆಯಲ್ಲಿ 21ಸಾವಿರ ವಿತರಕರಿದ್ದು, 12ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ’ ಎಂದರು. ಜಿಲ್ಲಾ ಘಟಕದ ಅಧ್ಯಕ್ಷ ರಾಜಣ್ಣ, ದೇವರಾಜು, ರಾಜೇಗೌಡ, ಶಿವಣ್ಣಗೌಡ, ಜವರೇಗೌಡ, ಜಯರಾಮು ಇದ್ದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ

ಶ್ರೀ ಎಸ್.ಬಿ. ಕೃಷ್ಣ ರವರು
(ಮಾಜಿ ಅಧ್ಯಕ್ಷರು, ಎಂ.ಪಿ.ಸಿ.ಎಸ್, ಮಂಡ್ಯ)

ಶಿವಳ್ಳಿ ಗ್ರಾಮ, ದುದ್ದ ಹೋಬಳಿ, ಮಂಡ್ಯ ತಾಲ್ಲೂಕು
(ಮಾ. ಛೇ|| ಲೇ|| ಬೋರೇಗೌಡರ ಮಗ)
ಶ್ರೀ ಎಸ್.ಬಿ. ಶಂಕರೇಗೌಡ ರವರು
ಮಾಡುವ ವಿಜ್ಞಾಪನೆಗಳು

ದಿನಾಂಕ 19.11.2019ನೇ ಮಂಗಳವಾರದಂದು ನನ್ನ ತಮ್ಮನವರು ದೈವಾಧೀನರಾಗಿದ್ದು, ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು **ದಿನಾಂಕ 29-11-2019ರ ಶುಕ್ರವಾರ ಬೆಳಿಗ್ಗೆ 11.30 ಗಂಟೆಗೆ ಶಿವಳ್ಳಿ ಗ್ರಾಮದ ಸ್ವಗೃಹದಲ್ಲಿ** ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ಇಂತಿ ದುಃಖತಪ್ತರು:
ಮೃತರ ಪತ್ನಿ ಶ್ರೀಮತಿ ಹೆಚ್. ಸಿ. ಯಮುನ
ಮಕ್ಕಳು, ಅಳಿಯಂದಿರು, ಸಹೋದರ ಸಹೋದರಿಯರು, ಮೊಮ್ಮಕ್ಕಳು,
ಚಿಕ್ಕಬೋರೇಗೌಡರ ಕುಟುಂಬವರ್ಗ ಶಿವಳ್ಳಿ, ಚಿಕ್ಕಮರಿದೇವೇಗೌಡರ ಕುಟುಂಬವರ್ಗ, ಹಾಡ್ಯ
ಹಾಗೂ ಬಂಧುಮಿತ್ರರು

ಚಿತ್ರಾವಳಿ

ಶ್ರೀರಂಗಪಟ್ಟಣದ ರಂಗನಾಥನಗರ ಸಮುದಾಯ ಭವನದಲ್ಲಿ ಭಾರತೀಯ ಮಜ್ದೂರ್ ಸಭಾ (ಬಿಎಂಎಸ್) ವತಿಯಿಂದ ಈಚೆಗೆ ಆರೋಗ್ಯ ಉಚಿತ ತಪಾಸಣೆ ಹಾಗೂ ಔಷಧ ವಿತರಣಾ ಶಿಬಿರ ನಡೆಯಿತು

ನಾಗಮಂಗಲ ತಾಲ್ಲೂಕಿನ ಲಾಳನಕೆರೆ ಪ್ರಾಥಮಿಕ ಶಾಲೆಗೆ ಬಿ.ಇ.ಎಲ್ ಉದ್ಯೋಗಿ ಎಲ್.ಕೆ.ಶಿವರಾಜು ಅವರು ₹1 ಲಕ್ಷ ಮೌಲ್ಯದ ಕಂಪ್ಯೂಟರ್, ಲೇಖನ ಸಾಮಗ್ರಿಗಳನ್ನು ನೀಡಿದರು. ರೇಣುಕಾ ಶಿವರಾಜ್, ರೂಪೇಶ್, ಮಂಜೇಶ್, ಸುರೇಶ್ ಇದ್ದರು